Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 38/2018

ಫ್ರಾ.ಸಾ. 5 ಚಾ.ಸಾ. 6

| | | |
|---|---|---|
| ಹೆಸರು | : | ಲಕ್ಷ್ಮಿ |
| ಗಂಡನ ಹೆಸರು | : | ತಿಮ್ಮಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸ | : | ಬಳಿಚಕ್ರ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 21-07-2025**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ಮೃತ ತಿಮ್ಮಪ್ಪ ನನ್ನ ಪತಿ. ಚಾಸಾ-1 ಶರಣಪ್ಪ ನನ್ನ ಮಾವ. ಚಾಸಾ-12 ರಿಂದ 14 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರಿರುವ 2ನೇ ಆರೋಪಿ ಮತ್ತು ಗೈರು ಹಾಜರಿರುವ 1ನೇ ಆರೋಪಿ ಗೊತ್ತು. 1ನೇ ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ರಹಿತವಾಗಿರುತ್ತದೆ ಎಂದು ಪ್ರತಿರಕ್ಷಣಾ ವಕೀಲರು ತಮ್ಮ ಮಾಫಿ ಅರ್ಜಿ ಸಲ್ಲಿಸಿರುತ್ತಾರೆ.

2. ಈಗ್ಗೆ ಸುಮಾರು 7 ವರ್ಷಗಳ ಹಿಂದೆ ಬಳಿಚಕ್ರ ಗ್ರಾಮದ ಬ್ಯಾಂಕನ ಮುಂಬಾಗ ಆರೋಪಿತರಾದ ಆಂಜನೆಯ ಮತ್ತು ಸಾಬಣ್ಣ ಇದ್ದು ನನ್ನ ಪತಿ ತಿಮ್ಮಪ್ಪ ಬರುತ್ತಿದ್ದು ಆರೋಪಿತರಿಬ್ಬರೂ ನನ್ನ ಪತಿಗೆ ಊಟ ಆಯಿತೇನು ಎಂದು ಕೇಳಿದ್ದು ನಂತರ ಮಾತಿಗೆ ಮಾತು ಬೆಳೆದು ಆರೋಪಿತರಿಬ್ಬರೂ ನನ್ನ ಪತಿಯನ್ನು ಸಿ.ಸಿ. ರಸ್ತೆಯ ಮೇಲೆ ನೂಕಿಕೊಟ್ಟಿದ್ದರಿಂದ ಅವರ ತಲೆಯ ಹಿಂಬಂದಿಗೆ ಮತ್ತು ಬೆನ್ನಿಗೆ ಗಾಯವಾಗಿದ್ದು ಚಾಸಾ-12 ಮತ್ತು 13 ರವರು ನನ್ನ ಪತಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದು ನಾನು ಅವರನ್ನು ವಿಚಾರಿಸಿದಾಗ ಘಟನೆಯ ಬಗ್ಗೆ ನನಗೆ ತಿಳಿಸಿರುತ್ತಾರೆ. ಆಗ ರಾತ್ರಿಯಾಗಿತ್ತು. ಮಾರನೇ ದಿನ ನಾವು ಅವರನ್ನು ಎಳಿಸಲು ಪ್ರಯತ್ನಿಸಿದರೂ ಮೇಲೆ ಏಳಲಿಲ್ಲ ಕೂಡಲೇ ಯಾದಗಿರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ರಾಯಚೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಅಲ್ಲಿಂದ ಬಳ್ಳಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದು ನಾವು

ಬಳ್ಳಾರಿ ಸರಕಾರಿ ಆಸ್ಪತ್ರೆಗೆ ಹೋಗಿದ್ದು ಮತ್ತೆ ಅಲ್ಲಿಂದ ವೈದ್ಯರು ಬೆಂಗಳೂರಿಗೆ ಕರೆದುಕೊಂಡು ಹೋಗಲು ಹೇಳಿದ್ದು ಬೆಂಗಳೂರಿಗೆ ಹೋಗುವ ಹಾದಿಯಲ್ಲಿ ಯಶ್ವಂತಪೂರ ಬಳಿ ನನ್ನ ಪತಿಯ ಜೀವ ಹೋಗಿರುತ್ತದೆ. ನನ್ನ ಪತಿಯ ಸಾವಿಗೆ 1 ಮತ್ತು 2 ನೇ ಆರೋಪಿತರು ಕಾರಣರಾಗಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ 2 ನೇ ಆರೋಪಿ ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ನಾವು ಸೈದಪೂರಕ್ಕೆ ಹಿಂದಿರುಗಿದ್ದು ಚಾಸಾ-1 ಶರಣಪ್ಪ ದೂರು ನೀಡಿರುತ್ತಾನೆ. ಪೊಲೀಸರು ನನ್ನನ್ನು ಈ ಬಗ್ಗೆ ವಿಚಾರಿಸಿರುತ್ತಾರೆ ನಾನು ಹೀಗೆ ಆಗಿರುತ್ತದೆ ಎಂದು ಹೇಳಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ</u>

3. 1 ಮತ್ತು 2 ನೇ ಆರೋಪಿತರು ನನ್ನ ಪತಿಯ ಜೊತೆ ಹೊಲದ ವಿಷಯವಾಗಿ ಜಗಳ ಮಾಡಿರುತ್ತಾರೆ. ಘಟನೆಗೂ ಒಂದು ವರ್ಷದ ಹಿಂದಿನಿಂದ ಹೊಲದ ವಿಚಾರವಾಗಿ ನಮಗೆ ಮತ್ತು ಆರೋಪಿತರಿಗೆ ಜಗಳ ಇತ್ತು. ಇಬ್ಬರೂ ಆರೋಪಿತರ ಅಜ್ಜನ ಹೆಸರು ಗೋವಿಂದಪ್ಪ ಎಂದರೆ ಸರಿ. ಅವರಿಗೆ ಇಬ್ಬರು ಪತ್ನಿಯರು ಇದ್ದರು ಎಂದರೆ ಸರಿ. ಮಲ್ಲವ್ವ ಮತ್ತು ಮಾಶಮ್ಮ ಎಂದರೆ ಸರಿ. ನನ್ನ ಮಾವ ಚಾಸಾ-1 ಮಾಶಮ್ಮನ ಮಗ ಇರುತ್ತಾರೆ ಎಂದರೆ ಗೊತ್ತಿಲ್ಲ. ಮಲ್ಲವ್ವಳಿಗೆ ಹಣಮವ್ವ ಎಂಬ ಒಬ್ಬಳೆ ಮಗಳು ಇದ್ದಳು ಎಂದರೆ ಸರಿ. ಆಕೆಗೆ ನರಸಪ್ಪನನ್ನು ಮದುವೆ ಮಾಡಿ ಮನೆಯ ಅಳಿಯನನ್ನಾಗಿ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಆರೋಪಿತರ ತಂದೆ ಒಬ್ಬನೇ ನರಸಪ್ಪ ಮತ್ತು ಹಣಮವ್ವ ಅವರ ಮಗ ಎಂದರೆ ಸರಿ. ಇಬ್ಬರೂ ಪತ್ನಿಯರು ಬಾಗ ಮಾಡಿಕೊಂಡು ಪ್ರತ್ಯೇಕವಾಗಿ ಬದುಕುತ್ತಿರುತ್ತಾರೆ ಎಂದರೆ ಸರಿ. ಎಲ್ಲ ಸ್ವತ್ತುಗಳು ಆರೋಪಿತರ ತಂದೆ ಭೀಮಣ್ಣ ಮತ್ತು ನನ್ನ ಮಾವ ಚಾಸಾ-1 ರವರ ಜಂಟಿ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಅವರು ಜಂಟಿ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿ. ಜಂಟಿ ಖಾತಾವನ್ನು ಬಿಡಿಸಲು ಸಾಕಷ್ಟು ಬಾರಿ ನನ್ನ ಮಾವ ಚಾಸಾ-1 ಕೇಳಿದ್ದರು ಎಂದರೆ ಸರಿಯಲ್ಲ. ಆ ವಿಚಾರವಾಗಿ ಹಲವಾರು ಬಾರಿ ಆರೋಪಿತರ ತಂದೆ ಮತ್ತು ನನ್ನ ಮಾವ ಚಾಸಾ-1 ರವರ ನಡುವೆ ಪಂಚಾಯತಿ ನಡೆದಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ಅವರ ಅವರ ಹೆಸರಿಗೆ ಪ್ರತ್ಯೇಕ ಮಾಡುವಂತೆ ಹೇಳಿದ್ದರೂ ಸಹ ಚಾಸಾ-1 ನನ್ನ ಮಾವ ಮಾಡಿಲ್ಲ ಎಂದರೆ ಸರಿಯಲ್ಲ.

4. ನಾನು ಈ ಪ್ರಕರಣದ ಘಟನೆಯ ಸಮಯದಲ್ಲಿ ಯಾವುದೇ ಸಂಗತಿಯನ್ನು ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆ ಸಮಯದಲ್ಲಿ ಮನೆಯಲ್ಲಿ ಇದ್ದೆ ಎಂದು ನುಡಿಯುತ್ತಾಳೆ. 1 ನೇ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇರುತ್ತಾನೆ ಎಂದರೆ ಊರಿಗೂ ಬರುತ್ತಾನೆ ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ

ಆರೋಪಿ ಸಹ ತನ್ನ ಮನೆಯ ಕೆಲಸದ ವಿಚಾರವಾಗಿ ನಾಗಲಾಪೂರಕ್ಕೆ ಘಟನೆಯ ದಿನದಂದು ಹೋಗಿದ್ದ ಎಂದರೆ ಸರಿಯಲ್ಲ.

5. ನನ್ನ ಪತಿ ನಿರಂತರ ಮಧ್ಯಪಾನ ಮಾಡುವ ಅಬ್ಯಾಸ ಹೊಂದಿದ್ದರು ಎಂದರೆ ಸಾಕ್ಷಿ ಆಗಾಗ ಮಾತ್ರ ಮಧ್ಯಪಾನ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಪತಿ ನಿರಂತರ ಕುಡಿದು ನಮ್ಮ ಗ್ರಾಮದಲ್ಲಿ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಊರಿನ ಬಸ್ ನಿಲ್ದಾಣದ ಬಳಿ ಹೊಟೇಲನವರ ಮೇಲೆ ನನ್ನ ಪತಿ ಕುಡಿದು ಗಲಾಟೆ ಮಾಡಿ ಪ್ರಕರಣ ದಾಖಲಾಗಿದ್ದವು ಎಂದರೆ ಸರಿಯಲ್ಲ. ನನ್ನ ಪತಿ ಘಟನೆಯ ದಿನದಂದು ನಾಗಲಾಪೂರಕ್ಕೆ ಹೋಗಿದ್ದರು. ನನ್ನ ಪತಿ ನಾಗಲಾಪೂರದಿಂದ ಬರುವಾಗ ಅತಿ ಹೆಚ್ಚು ಮಧ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ರಾಯಚೂರು-ಯಾದಗಿರಿ ರಸ್ತೆಯಿಂದ ನಮ್ಮ ಗ್ರಾಮಕ್ಕೆ ಹೋಗಲು ದೊಡ್ಡ ಸಿ.ಸಿ. ರಸ್ತೆ ಇರುತ್ತದೆ ಎಂದರೆ ಸರಿ. ರಸ್ತೆಯ ಎರಡೂ ಬದಿ ದೊಡ್ಡ ಚರಂಡಿಗಳು ಇರುತ್ತವೆ ಎಂದರೆ ಸರಿಯಲ್ಲ. ರಸ್ತೆಯ ಎರಡೂ ಬದಿ ಚರಂಡಿ ಇದ್ದರೂ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಮ್ಮ ಊರಿನ ಬ್ಯಾಂಕ ಮುಂಬಾಗ ಒಂದು ಬಸವರಾಜ ಎನ್ನುವವರ ಕಿರಾಣಿ ಅಂಗಡಿ ಇದೆ ಎಂದರೆ ಸರಿ. ಸದರಿ ಅಂಗಡಿಯ ಬಳಿ ಹಲವು ಸಾರ್ವಜನಿಕರು ಸಂಜೆಯ ಸಮಯದಲ್ಲಿ ಕುಡುತ್ತಾರೆ ಎಂದರೆ ಸರಿ. ಬಸವರಾಜ ಅವರ ಅಂಗಡಿಯ ಹಿಂಬಾಗ ದೊಡ್ಡ ಚರಂಡಿ ಇದೆ ಎಂದರೆ ಸರಿಯಲ್ಲ. ನನ್ನ ಪತಿ ಅತಿ ಹೆಚ್ಚು ಮಧ್ಯಪಾನ ಮಾಡಿ ಅಂಗಡಿಯ ಹಿಂಬಾಗದ ಚರಂಡಿಗೆ ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-12 ಮತ್ತು 13 ರವರು ನನಗೆ ಆ ದಿನದಂದು ನನ್ನ ಪತಿ ಚರಂಡಿಗೆ ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಯಾವ ದಿನಾಂಕದಂದು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

7. ನಾನು ನನ್ನ ಹೇಳಿಕೆಯಲ್ಲಿ ಚಾಸಾ-12 ಮತ್ತು 13 ರವರು ನನ್ನ ಪತಿ ಚರಂಡಿಯಲ್ಲಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿದ ನಂತರ ಅದನ್ನು ನನಗೆ ಓದಿ ಹೇಳಿರುತ್ತಾರೆ. ಚಾಸಾ-12 ಮತ್ತು 13 ರವರು ನನ್ನ ಪತಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದ ಸಮಯದಲ್ಲಿ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ನನ್ನ

ಪತಿ ತಾನೇ ಮದ್ಯಪಾನ ಮಾಡಿದ ನಶೆಯಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದು ಆ ಕಾರಣಕ್ಕೆ ಆತ ಮಾತನಾಡಲಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ನನ್ನ ಜೊತೆ ಘಟನೆಯ ಬಗ್ಗೆ ಮಾತನಾಡಿಲ್ಲ. ನನ್ನ ಪತಿ ಮಾರನೇ ದಿನ ಬೆಳಿಗ್ಗೆ 6-00 ಗಂಟೆಗೆ ಬಹಿರ್ದೆಸೆಗೆ ಹೋಗಿದ್ದರು. ಆ ಸಮಯದಲೂ ಸಹ ನನ್ನ ಪತಿ ಮದ್ಯಪಾನ ಮಾಡಿಯೇ ಇದ್ದ ಎಂದರೆ ಸರಿಯಲ್ಲ. ನನ್ನ ಪತಿ ಮದ್ಯಪಾನ ಮಾಡಿದ ಕಾರಣ ಪ್ರಜ್ಞೆ ತಪ್ಪಿ ಬಿದ್ದು ಗಾಯ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

೮. ನಾನು ಸಹ ನನ್ನ ಪತಿಯ ಜೊತೆ ಆಟೋದಲ್ಲಿ ಆಸ್ಪತ್ರೆಗೆ ಹೋಗಿದ್ದೆ. ನಾವು ಖಾಸಗಿ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ನನ್ನ ಪತಿ ಮದ್ಯಪಾನ ಮಾಡಿ ಗಾಯಪಡಿಸಿಕೊಂಡಿರುತ್ತಾನೆ ಎಂದು ವೈದ್ಯರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಸರಕಾರಿ ಅಸ್ಪತ್ರೆಯಲೂ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿಯ ಸಾವಿಗೆ ಆರೋಪಿತರು ಕಾರಣರಲ್ಲದಿದ್ದರೂ ನಮ್ಮ ಮತ್ತು ಅವರ ನಡುವೆ ಜಮೀನಿನ ವಿವಾದದಿದಾಂಗಿ ಅವರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಷಯ ತಿಳಿಯದಿದ್ದರೂ ನಮ್ಮ ಮನೆಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.